ಶ್ರೀ ಸಿ.ಬಿ.ಸುರೇಶ್ ಬಾಬು :- ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು :- ಮತ್ತೆ ಚರ್ಚೆ ಬೇಡ. ಈಗಾಗಲೇ ಎಲ್ಲವನ್ನೂ ಹೇಳಿದ್ದೀರಿ. ಮತ್ತೆ ಮಾನ್ಯ ಸಚಿವರು Statement ಮಾಡಿದಾಗ ಏನಾದರೂ ಇದ್ದರೆ ಕೇಳುವಿರಂತೆ. ಮಾನ್ಯ ವಿರೋಧ ಪಕ್ಷದ ನಾಯಕರು ಇದರ ಬಗ್ಗೆ ಪ್ರಸ್ತಾಪಿಸಿದರು. ತಾವೂ ಸಹ ಹೇಳಿದ್ದೀರಿ.

ಶ್ರೀ ಸಿ.ಬಿ.ಸುರೇಶ್ ಬಾಬು :- ಇದು ತುಂಬಾ ಸೂಕ್ಷ್ಮವಾದ ವಿಚಾರವಾಗಿದೆ. ಹಿಂದೆ ತಿಪಟೂರಿನಲ್ಲೂ ಈ ರೀತಿ ಆಗುತ್ತಿತ್ತು. ಈಗ ಶಿರಾದಲ್ಲಿ ಆಗುತ್ತಿದೆ. ಈ ಭಾಗದಲ್ಲಿ ಸುಮ್ಮನೆ ಗಲಾಟೆ ಆಗಬಾರದು ಎಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ದಯಮಾಡಿ, ಇದರ ಬಗ್ಗೆ ಮುನ್ನೆಚ್ಚರಿಕೆಯನ್ನು ಗೃಹ ಇಲಾಖೆಯವರು ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ಶ್ರೀ ಎಸ್. ಶಿವಣ್ಣ :- ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು :- ಮಾನ್ಯ ಶಿವಣ್ಣನವರೆ, ಅದರ ಬಗ್ಗೆ ಚರ್ಚೆ ಈಗ ಬೇಡ.

ಶ್ರೀ ಎಸ್.ಶಿವಣ್ಣ :- ಅವರು ಹೇಳುವುದು ಮಾಡುವುದು ಬೇಡ. ಯಾವುದನ್ನು ಯಾವುದಕ್ಕೋ ಹೋಲಿಸುತ್ತಾರೆ....

ಅಧ್ಯಕ್ಷರು :- ಆಯಿತು. ಈಗ ಮಾನ್ಯ ತನ್ವೀರ್ ಸೇಠ್‌ರವರು ಮಾನ್ಯ ಚಿಕ್ಕಣ್ಣನವರ ಪರವಾಗಿ ಗಮನ ಸೆಳೆಯಬೇಕೆಂದು ಕೋರುತ್ತೇನೆ.

(ಇ) ವಿಷಯ :- <u>2006-07ರ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಯವರ ಆಡಳಿತ ಅವಧಿಯಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ನ್ಯಾಯಾಂಗ ತನಿಖೆ ನಡೆಸುವ ಬಗ್ಗೆ.</u>

ಶ್ರೀ ತನ್ವೀರ್ ಸೇಠ್ (ನರಸಿಂಹರಾಜ) (ಮಾನ್ಯ ಚಿಕ್ಕಣ್ಣನವರ ಪರವಾ) :- ಮಾನ್ಯ ಅಧ್ಯಕ್ಷರೆ, 2006-07ರ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಯವರ ಆಡಳಿತ ಅವಧಿಯಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ನ್ಯಾಯಾಂಗ ತನಿಖೆ ನಡೆಸುವ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.

ಅಧ್ಯಕ್ಷರು :- ಮಾನ್ಯ ಉನ್ನತ ಶಿಕ್ಷಣ ಸಚಿವರು ಇಲ್ಲ. ಮಾನ್ಯ ಚಿಕ್ಕಣ್ಣನವರ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಪರವಾಗಿ ಯಾರು ಉತ್ತರ ಕೊಡುತ್ತೀರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಉತ್ತರ ಕೊಡಲಿಕ್ಕೆ ಮಿನಿಸ್ಟರ್ ಇಲ್ಲವೆಂದರೆ ಹೇಗೆ? ನೀವು ಬೇರೆ ಯಾರನ್ನಾದರೂ ಆ ಖಾತೆ ಸಚಿವರನ್ನಾಗಿ ಮಾಡಿ.

ಅಧ್ಯಕ್ಷರು :- ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ಕರೆಸಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಉತ್ತರ ಕೊಡಲು ಸಚಿವರನ್ನು ಕರೆಸುವಂತೆ ನಾವೇ ಕೇಳಿಕೊಳ್ಳಬೇಕೇ? ನಿಮಗೆ ಗೊತ್ತಿದ್ದಂತೆ ಇದು special session ಆಗಿದೆ. ಇಲ್ಲಿ ಈ ಕೆಲಸ ಬಿಟ್ಟು ಬೇರೆ ಯಾವ ಕೆಲಸ ಇದೆ? ಇಲ್ಲಿ ಕಛೇರಿಗೆ ಬಂದು ಭೇಟಿಯಾಗುವವರು ಯಾರೂ ಇರುವುದಿಲ್ಲ. ಸಂಪೂರ್ಣವಾಗಿ free ಇದ್ದರೂ ಕೂಡ, ಸಚಿವರು ಏಕೆ ಸದನದಲ್ಲಿ ಇಲ್ಲ. ಅವರಿಗೇನು ಕೆಲಸ ಇದೆ? ಇಲ್ಲಿ ಏನಾದರೂ ಗಾಳಿ ತಿನ್ನುವುದಕ್ಕೆ ಹೋಗುತ್ತಾರೆಯೇ? ನಾವು ಏನಾದರೂ ಹೇಳಿದರೆ, ಮಾನ್ಯ ಮುಖ್ಯಮಂತ್ರಿಗಳಿಗೆ ಸಿಟ್ಟು ಬರುತ್ತದೆ.

ಡಾ॥ ವಿ.ಎಸ್. ಆಚಾರ್ಯ :- ಮಾನ್ಯ ಅಧ್ಯಕ್ಷರು ಅಪ್ಪಣೆ ಕೊಟ್ಟರೆ ಅವರ ಪರವಾಗಿ ನಾನೇ ಉತ್ತರ ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಕೊಟ್ಟ ಜವಾಬ್ದಾರಿಯನ್ನೂ ಕೂಡ ನಿಭಾಯಿಸುವುದಿಲ್ಲ ಎಂದರೆ ಹೇಗೆ? ಅವರಿಗೆ ನೀವು ಜವಾಬ್ದಾರಿಯನ್ನೇ ಕೊಡಬಾರದು.

ಡಾ॥ ಬಿ.ಎಸ್. ಯಡಿಯೂರಪ್ಪ :- ನಿಮ್ಮ ಸಲಹೆ ಸರಿ ಇದೆ. ಯಾವುದೇ ಸಚಿವರು ಸದನದ ಕಾರ್ಯಕಲಾಪ ನಡೆಯಬೇಕಾದರೆ ಬೇರೆ ಕಾರ್ಯಕಲಾಪಗಳನ್ನು ಇಟ್ಟುಕೊಳ್ಳಬಾರದು ಎಂದು ಹೇಳಿದ್ದೇನೆ. ತಾವು ಇಲ್ಲಿರುವಂತಹ ಸಂಖ್ಯೆಯನ್ನೂ ಸಹ ನೋಡಿ. ಮಾನ್ಯ ಉದಾಸಿ ಮತ್ತು ಮತ್ತಿಬ್ಬರು ಸಚಿವರು ಘಟನೆ ಏನು ನಡೆಯಿತು, ಅಲ್ಲಿಗೆ ಹೋಗಿದ್ದಾರೆ. ಮಾನ್ಯ ಅರವಿಂದ ಲಿಂಬಾವಳಿಯವರಿಗೆ ಖಂಡಿತವಾಗಿಯೂ ಇನ್ನು ಮುಂದೆ ಈ ರೀತಿ ಆಗದಂತೆ ಎಚ್ಚರಿಕೆ ವಹಿಸಿ ಎಂದು ತಿಳಿಸುತ್ತೇನೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು :- ವಿರೋಧ ಪಕ್ಷದ ಸದಸ್ಯರೂ ಸಹ ಹೆಚ್ಚಿನ ಸಂಖ್ಯೆಯಲ್ಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಿಮ್ಮ ಮೇಲೆ ಜವಾಬ್ದಾರಿ ಜಾಸ್ತಿ ಇದೆ. ನಾವು ಕುಳಿತಿರುವಷ್ಟು ಸಂಖ್ಯೆಯಲ್ಲಿ ನೀವು ಕುಳಿತಿದ್ದರೆ ಸಾಕು.

ಡಾ॥ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಖರ್ಗೆಯವರು ಈ ಕುರ್ಚಿ ಮೇಲೆ ಕುಳಿತು ಅಪಾರ ಅನುಭವಗಳಿಸಿದ್ದಾರೆ. ಹೊಸದಾಗಿ ಸಚಿವರಾಗಿರುವವರು 25-30 ವರ್ಷಗಳ ಕಾಲ ಈ ಕುರ್ಚಿ ಮೇಲೆ ಕುಳಿತುಕೊಂಡಿರಬೇಕು ಎಂಬ ಸಲಹೆಯನ್ನು ಅವರು ಕೊಟ್ಟಿದ್ದಾರೆ. ಅವರ ಸಲಹೆಯನ್ನು ನೀವು ಸ್ವೀಕಾರ ಮಾಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಿಮ್ಮ ಸಚಿವರು ಒಂದು ತಾಸು ಕುಳಿತುಕೊಳ್ಳಿ ಎಂದರೆ ಕುಳಿತುಕೊಳ್ಳುವುದಿಲ್ಲ. ಇನ್ನು ಅವರು 25-30 ವರ್ಷಗಳ ಕಾಲ ಹೇಗೆ ಕುಳಿತುಕೊಳ್ಳುತ್ತಾರೆ?

ಡಾ॥ ವಿ.ಎಸ್. ಆಚಾರ್ಯ :- ಮಾನ್ಯ ಅಧ್ಯಕ್ಷರೆ, ಮಾನ್ಯ ಉನ್ನತ ಶಿಕ್ಷಣ ಸಚಿವರಾದ ಅರವಿಂದ ಲಿಂಬಾವಳಿಯವರು ಮೇಲ್ಮನೆಯಲ್ಲಿದ್ದಾರೆ. ತಮ್ಮ ಅಪ್ಪಣೆ ಪಡೆದು ಅವರ ಪರವಾಗಿ ನಾನು ಗಮನ ಸೆಳೆಯುವ ಸೂಚನೆಗೆ ಉತ್ತರಿಸುತ್ತೇನೆ.

ಅಧ್ಯಕ್ಷರು :- ಆಯಿತು.

ಡಾ॥ ವಿ.ಎಸ್.ಆಚಾರ್ಯ (ಗೃಹ ಸಚಿವರು) (ಮಾನ್ಯ ಉನ್ನತ ಶಿಕ್ಷಣ ಸಚಿವರ ಪರವಾಗಿ) :- ಮಾನ್ಯ ಅಧ್ಯಕ್ಷರೆ,

ಮೈಸೂರು ವಿಶ್ವವಿದ್ಯಾಲಯದಲ್ಲಿ 2006-07 ರ ಅವಧಿಯಲ್ಲಿ ವಿಶ್ರಾಂತ ಕುಲಪತಿಯವರ ಆಡಳಿತದಲ್ಲಿ ಉಪನ್ಯಾಸಕರು, ಪ್ರವಚಕರು ಮತ್ತು ಪ್ರಾಧ್ಯಾಪಕರುಗಳ ಹುದ್ದೆಗಳ ನೇರ ನೇಮಕಾತಿಯಲ್ಲಿ ಆಗಿದೆಯೆನ್ನಲಾದ ನಿಯಮಗಳ ಉಲ್ಲಂಘನೆ ಹಿನ್ನೆಲೆಯಲ್ಲಿ ಸಿಂಡಿಕೇಟ್ ನಿರ್ಣಯವನ್ನು ವಜಾಗೊಳಿಸಬಾರದೇಕೆ. ಹಾಗೂ ಸದರಿ ನಿರ್ಣಯವನ್ನು ಕೈಗೊಳ್ಳಲು ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳಬಾರದೇಕೆ ಎಂದು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮ 2000 ಪ್ರಕರಣದ 10 ಅಡಿಯಲ್ಲಿ ಕಾರಣ ಕೇಳುವ ನೋಟೀಸ್‌ನ್ನು ಜಾರಿ ಮಾಡಲಾಗಿತ್ತು. ಈ ವಿಷಯದಲ್ಲಿ ದಿನಾಂಕ : 09-01-2008 ರಂದು ನಡೆದ ಮೈಸೂರು ವಿಶ್ವವಿದ್ಯಾಲಯದ ವಿಶೇಷ ಸಿಂಡಿಕೇಟ್ ಸಭೆಯು ಸರ್ಕಾರದ ಕಾರಣ ಕೇಳುವ ನೋಟೀಸ್‌ನ್ನು ಸಮಗ್ರವಾಗಿ ಚರ್ಚಿಸಿದೆ. ಪ್ರಾಧ್ಯಾಪಕರು ಹಾಗೂ ಪ್ರವಾಚಕರ ಹುದ್ದೆಗಳ ನೇಮಕಾತಿಯಲ್ಲಿ

ಮೀಸಲಾತಿ ನಿಯಮಗಳನ್ನು ಉಲ್ಲಂಘಿಸಲಾಗಿದೆ. ಬೋಧನಾ ಅನುಭವವನ್ನು ಪರಿಗಣಿಸುವಾಗ ಅಂಕಗಳನ್ನು ನೀಡುವಲ್ಲಿ ತಾರತಮ್ಯ ಮಾಡಲಾಗಿದೆ. ಮತ್ತು ಹುದ್ದೆಗೆ ಯು.ಜಿ.ಸಿ.ಯು ನಿಗದಿ ಪಡಿಸಿರುವ ವಿದ್ಯಾರ್ಹತೆ ಹಾಗೂ ಇನ್ನಿತರ ನಿಯಮ ಮತ್ತು ನಿಬಂಧನೆಗಳ ಉಲ್ಲಂಘನೆಯಾಗಿದೆ. ಅಲ್ಲದೇ ಉಪನ್ಯಾಸಕರ ಹುದ್ದೆಗೆ ನೇಮಕಾತಿಯಲ್ಲಿ ಮೀಸಲಾತಿ ಉಲ್ಲಂಘನೆ ಹಾಗೂ ಹಲವರ ಜಾತಿ ಮತ್ತು ಆದಾಯ ಪ್ರಮಾಣಪತ್ರಗಳನ್ನು ಪುನರ್ ಪರಿಶೀಲಿಸಲು ನಿರ್ಣಯಿಸಲಾಗಿದ್ದು, ಈ ಎಲ್ಲಾ ಅಂಶಗಳನ್ನು ಸರ್ಕಾರವು ಸಮಗ್ರವಾಗಿ ಪರಿಶೀಲಿಸಿ ಸದರಿ ಹುದ್ದೆಗಳ ನೇರ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ನಿಯಮಗಳ ಉಲ್ಲಂಘನೆ ಹಾಗೂ ಅಕ್ರಮಗಳ ಕುರಿತು ಶ್ರೀ ಹೆಚ್. ರಂಗವಿಠಲಾಚಾರ್ (ನಿವೃತ್ತ) ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಿಂದ ವಿಚಾರಣೆಯನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 8 ರಡಿಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ.

ಬೋಧಕೇತರ ಸಿಬ್ಬಂದಿಗಳ ಖಾಯಂಮಾತಿಯಲ್ಲಿ ಮೀಸಲಾತಿ ಉಲ್ಲಂಘನೆ, ಸರ್ವೋಚ್ಚ ನ್ಯಾಯಾಲಯದ ಆದೇಶ ಮತ್ತು ರಾಜ್ಯ ಸರ್ಕಾರದ ನೀತಿ ನಿಯಮಗಳನ್ನು ಉಲ್ಲಂಘಿಸಿರುವುದು ಕಂಡು ಬಂದ ಹಿನ್ನೆಲೆಯಲ್ಲಿ ಬೋಧಕೇತರ ಸಿಬ್ಬಂದಿಗಳ ಖಾಯಂಮಾತಿ ಆದೇಶವನ್ನು ವಜಾಗೊಳಿಸಲಾಗಿದೆ. ಅಲ್ಲದೇ ಸದರಿ ಬೋಧಕೇತರ ಸಿಬ್ಬಂದಿಗಳ ಖಾಯಂಮಾತಿ /ಸಕ್ರಮಾತಿಗೆ ಕಾರಣರಾದ ಅಧಿಕಾರಿ/ ಸಿಬ್ಬಂದಿಗಳ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳುವ ಕುರಿತು ಪರಿಶೀಲಿಸಲಾಗುತ್ತಿದೆ.

ಶ್ರೀ ತನ್ವೀರ್ ಸೇಠ್ :- ಮಾನ್ಯ ಅಧ್ಯಕ್ಷರೆ, ಈ ವಿಚಾರವು ಅತ್ಯಂತ ಗಂಭೀರವಾದುದಾಗಿದೆ. ಕಳೆದ ಜುಲೈಯಲ್ಲಿ ಮಾನ್ಯ ಮುಖ್ಯಮಂತ್ರಿಗಳು 'ಇದರಲ್ಲಿ ಏನಾದರೂ ಸತ್ಯಾಂಶಗಳಿದ್ದರೆ, 24 ಗಂಟೆಗಳಲ್ಲಿ ತೀರ್ಮಾನ ತೆಗೆದುಕೊಂಡು ಕ್ರಮ ಜರುಗಿಸುತ್ತೇವೆ' ಎಂದು ಸದನಕ್ಕೆ ಆಶ್ವಾಸನೆ ನೀಡಿದ್ದರು. ಈಗ ಮಾನ್ಯ ಸಚಿವರು ನೀಡಿರುವಂತಹ ಉತ್ತರದ ಹಿನ್ನೆಲೆಯಲ್ಲಿ ಆಗಿರುವಂತಹ ಅಕ್ರಮಗಳಲ್ಲಿ ಕೇವಲ ಒಂದರ ಬಗ್ಗೆ ಮಾತ್ರ, ಅಂದರೆ ಏನು ನೇರ ನೇಮಕಾತಿ ಇದೆ, ಅದಕ್ಕೆ ಸಂಬಂಧಿಸಿದಂತೆ ತನಿಖೆಯೊಂದನ್ನು ಮಾಡಿರುವುದು ಸ್ವಾಗತಾರ್ಹ. ಆದರೆ ಈ 2006-07ನೇ ಸಾಲಿನಲ್ಲಿ ಇದ್ದಂತಹ ವಿಶ್ರಾಂತ ಕುಲಪತಿಯ ಆಡಳಿತ ಅವಧಿಯಲ್ಲಿ ತಾತ್ಕಾಲಿಕ ಉಪನ್ಯಾಸಕರ ಖಾಯಮಾತಿ ಪ್ರಕರಣವೂ ಸಹ ಸೇರಿದೆ. ಇದರ ಜೊತೆಗೆ, ಈ

out reach programme ನಲ್ಲಿ ಆಗಿರುವಂತಹ ಅವ್ಯವಹಾರಗಳು ಮತ್ತು ಭ್ರಷ್ಟಾಚಾರಗಳು, ರಸಾಯನ ಶಾಸ್ತ್ರ ವಿಭಾಗದಲ್ಲಿ Ph.D. ಕೊಡುವಂತಹ ಸಂದರ್ಭದಲ್ಲಿ ನಿಯಮಗಳನ್ನು ಉಲ್ಲಂಘನೆ ಮಾಡಿರುವುದು, ಕಟ್ಟಡ ಕಾಮಗಾರಿಗಳಲ್ಲಿ ಆಗಿರುವಂತಹ ಅವ್ಯವಹಾರಗಳು, ಈ ಎಲ್ಲವೂ ಸಹ ಸೇರಿಸಿ ನ್ಯಾಯಾಂಗ ತನಿಖೆಯೊಂದನ್ನು ನಡೆಸಬೇಕೆಂಬ ಒತ್ತಾಯವನ್ನು ನಾವು ಮಾಡುತ್ತಿದ್ದೇವೆ.

ಜೊತೆಗೆ ಮಾನ್ಯ ಸರ್ಕಾರ ಈಗಾಗಲೇ ಹೈಕೋರ್ಟ್ ನಿವೃತ್ತ ನ್ಯಾಯಾಧೀಶರಿಂದ ಸಮಗ್ರವಾಗಿ ನ್ಯಾಯಾಂಗ ತನಿಖೆ ಮಾಡಲು ಏನು ತೀರ್ಮಾನವನ್ನು ತೆಗೆದುಕೊಂಡಿದ್ದೀರಿ, 6 ತಿಂಗಳು ಕಳೆದಿದ್ದರು ಸಹ ಈ ಬಗ್ಗೆ ಯಾವುದೇ ಒಂದು ಔಟ್‌ಕಂ ಬರುವುದಾಗಿದೆ. ತಾವು ಕಾರಣ ಕೇಳಿ ಜಾರಿ ಮಾಡಿದ ನೋಟಿಸ್, ಮತ್ತು ಯುಜಿಸಿಯಿಂದಲೂ ಕಾರಣ ಕೇಳುವ ನೋಟಿಸ್ ಬಂದಿದೆ. ತಪ್ಪು ಮಾಹಿತಿಯನ್ನು ಕೊಟ್ಟದ್ದಾರೆ ಎಂದು ಮಾಹಿತಿ ಬಂದಿರುವ ಹಿನ್ನೆಲೆಯಲ್ಲಿ ಈ ಬಗ್ಗೆ ಸೂಕ್ತವಾದ ಒಂದು ತೀರ್ಮಾನ ಅಗತ್ಯವಾಗಿದೆ. ಎಲ್ಲಾ ಪ್ರಕರಣಗಳು ಕಟ್ಟಡ ಕಟ್ಟುವುದಾಗಿರಬಹುದು ಅಥವಾ ಅವರು ಪಿಹೆಚ್‌ಡಿ ನೀಡುವ ಸಂದರ್ಭದಲ್ಲಿ ನಿಯಮಗಳನ್ನು ಉಲ್ಲಂಘನೆ ಮಾಡಿರುವ ವಿಚಾರದಲ್ಲಾಗಿರಬಹುದು, ಆಗಿರುವ ಈ ಅಕ್ರಮಗಳ ವಿಚಾರದಲ್ಲಿ ಒಂದು ಪ್ರಕರಣಕ್ಕೆ ಮಾತ್ರ ತಾವು ಕ್ರಮ ತೆಗೆದುಕೊಂಡಿದ್ದೀರಿ, ನಾನು ಸ್ವಾಗತಿಸುತ್ತೇನೆ. ಆದರೆ ನಡೆದಿರುವ ಬೇರೆ ಅವ್ಯವಹಾರಗಳ ಬಗ್ಗೆ ಎಲ್ಲವನ್ನೂ ಸೇರಿಸಿ ಸಮಗ್ರವಾಗಿ ಒಂದು ತನಿಖೆಯಾಗಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಡಾ॥ ವಿ.ಎಸ್ ಆಚಾರ್ಯ:- ರಿಟೈರ್ಡ್ ಜಸ್ಟೀಸ್ ರಂಗವಿಠಲಾಚಾರ್‌ರವರ ನೇತೃತ್ವದಲ್ಲಿ, ನೇಮಕಾತಿ, ರೋಸ್ಟರ್ ಉಲ್ಲಂಘನೆಯ ಬಗ್ಗೆ ನ್ಯಾಯ್ಯಾಂಗ ತನಿಖೆ ಆಗುತ್ತದೆ. ಮತ್ತು ಕರ್ನಾಟಕ ಯುನವರ್ಸಿಟಿ ಆಕ್ಟ್ ನಲ್ಲಿ ಏನು ಪ್ರೊವೈಡ್ ಮಾಡಿದ್ದಾರೆ ಆ ಪ್ರಕಾರ ಆಗಬೇಕಾಗಿದೆ, ಅದನ್ನು ಮಾಡುತ್ತೇವೆ, ಆದರೆ ವಾಕ್ಯವನ್ನು ಹಿಗ್ಗಿಸಿ ತಾವು ಹೇಳುವುದನ್ನು ಮಾಡಿಸುವುದಾದರೆ ಅದನ್ನು ಮಾಡಿಸುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ[ವಿರೋಧ ಪಕ್ಷದ ನಾಯಕರು]:- ಬ್ಯಾಕ್‌ಲಾಗ್ ವಯಲೆಟ್ ಮಾಡಿದ್ದರಿಂದ ತನಿಖೆ ಆಗಬೇಕೆಂದು ಮೊದಲಿನಿಂದಲೂ ಅಜಿಟೇಷನ್ ಎಲ್ಲಾ ಮಾಡಿದ್ದರು, ಆ ಪ್ರಕಾರ ಮಾಡಿದ್ದೀರಿ. ಆದರೆ ಇಂಪ್ಲಿಮೆಂಟೇಷನ್‌ನಲ್ಲಿ ಡಿಲೇ ಆಗುತ್ತಿದೆ, ಅದಕ್ಕೆ ನೀವು ಒಂದು ತಿಂಗಳು ಒಂದುವರೆ ತಿಂಗಳೆಂದು ಒಂದು ಸಮಯ ನಿಗದಿ ಮಾಡಿ.

ಡಾ॥ ಎ.ಎಸ್. ಆಚಾರ್ಯ:- O.K ಸರ್.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಓಕೆ ಎಂದರೆ ಪ್ರೊಸಿಡಿಂಗ್ಸ್ ನಲ್ಲಿ ಹೋಗಬೇಕಲ್ಲಾ?

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:- ಅಧ್ಯಕ್ಷರೆ, ಈ ಬಗ್ಗೆ ನಾನು ಮಾತನಾಡಬೇಕಾಗಿದೆ ಅವಕಾಶ ಕೊಡಿ.

ಅಧ್ಯಕ್ಷರು :- ಈ ಗಮನ ಸೆಳೆಯುವ ಸೂಚನೆಯನ್ನು ಯಾರು ಕೇಳಿದ್ದಾರೆ, ಅವರು ಕೇಳಲಿ, ನೀವು ಸುಮ್ಮನೆ ಕುಳಿತುಕೊಳ್ಳಿ, ಎಲ್ಲದಕ್ಕೂ ಮಾತನಾಡಲು ಅವಕಾಶ ಕೊಡಿ ಎಂದು ನೀವು ಈ ರೀತಿ ನಿಂತುಕೊಂಡರೆ ಆಗುವುದಿಲ್ಲ. ಸದನದ ನಿಯಮವೇನಿದೆ ಎಂಬುದನ್ನು ತಿಳಿದುಕೊಳ್ಳಿ ಮೊದಲು. ಈ ರೀತಿ ನೀವು ಇಂಟರಪ್ಟ್ ಮಾಡಬಾರದು, ಎಲ್ಲದಕ್ಕೂ ಅವಕಾಶ ಕೊಡಲಾಗುವುದಿಲ್ಲ, ಎಲ್ಲಾ ವಿಷಯಕ್ಕೂ ನೀವೇ ಮಾತನಾಡಬೇಕೆಂದೇನು ಇಲ್ಲ, ಎಲ್ಲಾ ಸದಸ್ಯರು ಮಾತನಾಡಬೇಕಾಗುತ್ತದೆ, ಎಲ್ಲಾ ವಿಷಯಕ್ಕೂ ಪದೆ ಪದೆ ಎದ್ದು ನಿಂತುಕೊಳ್ಳುವುದು ಸರಿಯಲ್ಲ, ಮೊದಲು ಸದನದ ನಿಯಮವೇನಿದೆ ಎಂಬುದನ್ನು ತಿಳಿದುಕೊಳ್ಳಿ, ಹುಕ್ಕೇರಿಯವರೆ ನಿಮ್ಮ ಗಮನ ಸೆಳೆಯುವ ಸೂಚನೆಯನ್ನು ಕೇಳಿ.

(ಈ) ವಿಷಯ: ಚಿಕ್ಕೋಡಿ ಸದಲಗಾ ಕ್ಷೇತ್ರದಲ್ಲಿ ದೂಧ ಗಂಗಾ ನದಿಗೆ ಬ್ಯಾರೇಜನ್ನು ಕಟ್ಟಲಾಗಿದ್ದು, ಇದರಿಂದ ಸದಲಗ ಪಟ್ಟಣಕ್ಕೆ ಕುಡಿಯುವ ನೀರು ಪೂರೈಕೆಯಾಗುತ್ತಿದ್ದು ಕಳೆದ ಮಳೆಗಾಲದಲ್ಲಿ ದೂಧಗಂಗಾ ನದಿಗೆ ಮಹಾಪೂರದಿಂದ ಬ್ಯಾರೇಜ್ ಸಂಪೂರ್ಣ ಹಾಳಾಗಿದ್ದು, ನೀರನ್ನು ನಿಲ್ಲಿಸಲಿಕ್ಕಾಗುತ್ತಿಲ್ಲದಿರುವುದರಿಂದ ಕುಡಿಯುವ ನೀರಿನ ಪೂರೈಕೆಗೆ ತೊಂದರೆಯಾಗಿರುವ ಬಗ್ಗೆ.

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ ಯೋಜನೆ ಮತ್ತು ಸಾಂಖ್ಯಿಕ ಸಚಿವರು) :-

ಬೆಳಗಾವಿ ಜಿಲ್ಲೆ, ಚಿಕ್ಕೋಡಿ ತಾಲ್ಲೂಕಿನ ಸದಲಗಾ ಹತ್ತಿರ ದೂಧಗಂಗಾ ನದಿಗೆ 1965-66 ನೇ ಸಾಲಿನಲ್ಲಿ 2.25 ಲಕ್ಷ ರೂ.ಗಳ ವೆಚ್ಚದೊಂದಿಗೆ ಬ್ರಿಡ್ಜ್ ಕಂ.